RNU AIR DHARWAD

APRIL 17, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಸಾಮಾಜೋ ಆರ್ಥಿಕ ಸಮೀಕ್ಷೆ ವರದಿ; ಇಂದು ಬೆಂಗಳೂರಿನಲ್ಲಿ, ವಿಶೇಷ ಸಚಿವ ಸಂಪುಟ ಸಭೆಯಲ್ಲಿ, ಚರ್ಚೆ.**
- **ರಾಜ್ಯದ ಪ್ರಮುಖ ರೇಲ್ವೆ ಯೋಜನೆಗಳ ಸ್ಥಿತಿಗತಿ; ಕೆ–ರೈಡ್ ಪ್ರತಿನಿಧಿಗಳೊಂದಿಗೆ, ಸಚಿವ ಎಂ.ಬಿ. ಪಾಟೀಲ, ಸಮಾಲೋಚನೆ.**
- **ಕರ್ನಾಟಕದಲ್ಲಿ, 7 ಸಾವಿರ ಕುಸುಮರೋಗಿಗಳು – ಹಿಮೋಫೀಲಿಯಾ ಸೊಸಾಯಿಟಿ ಅಧ್ಯಕ್ಷ, ಡಾಕ್ಟರ್ ಸುರೇಶ ಹನಗವಾಡಿ, ಮಾಹಿತಿ.**
- **ಮುದ್ದಂಡ ಕಪ್ ಹಾಕಿ; ಸೋಮವಾರದಿಂದ, 56 ಮಹಿಳಾ ತಂಡಗಳು ಪಂದ್ಯಾವಳಿಯಲ್ಲಿ, ಭಾಗಿ.**

<><><>

**ಈಗ ವಾರ್ತೆಗಳ ವಿವರ**

<><><>

**ಇಂದು, ಸಾಮಾಜಿಕ, ಆರ್ಥಿಕ ಸಮೀಕ್ಷೆಯ ಕುರಿತು, ವಿಶೇಷ ಸಚಿವ ಸಂಪುಟ ಸಭೆ ಸಂಜೆ 4 ಗಂಟೆಗೆ, ಬೆಂಗಳೂರಿನಲ್ಲಿ ನಡೆಯಲಿದೆ; ಶಾಸಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸಭೆಯಲ್ಲಿ ಚರ್ಚಿಸಿ, ಅಂತಿಮ ನಿರ್ಣಯ ಕೈಗೊಳ್ಳುವುದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಕಲಬುರಗಿಯಲ್ಲಿ ಅವರು ಈ ವಿಷಯ ತಿಳಿಸಿ, ಸಾಮಾಜಿಕ, ಆರ್ಥಿಕ ಸಮೀಕ್ಷೆ ಇದಾಗಿದ್ದು, ಯಾವ ಸಮುದಾಯದವರಿಗೂ ಅನ್ಯಾಯವಾಗದು ಎಂದು, ಸ್ಪಷ್ಟ ಪಡಿಸಿದರು.**

<><><>

**ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿ, ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ, ಜಾತಿ ಜನ ಗಣತಿ ವರದಿ ಬಗ್ಗೆ, ಸುಧೀರ್ಘ ಚಿಂತನ–ಮಂಥನ ನಡೆಯಲಿದೆ ಎಂದರು. ಜಾತಿ ಜನ ಗಣತಿ ವರದಿ ಬಗ್ಗೆ, ಎಲ್ಲೆಡೆ ಪರ–ವಿರೋಧ ಚರ್ಚೆಗಳು ಆರಂಭವಾಗಿವೆ. ಸರ್ಕಾರ ಈ ನಿಟ್ಟಿನಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲಿದೆ. ಯಾರಿಗೂ ಅನ್ಯಾಯವಾಗದು, ಎಂದರು.**

<><><>

**2 ಸಾವಿರದ 25 ಕೋಟಿ ರೂಪಾಯಿ ಮೊತ್ತದ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಬೀದರ ಜಿಲ್ಲಾ ಕ್ರೀಡಾಂಗಣದಲ್ಲಿ, ಚಾಲನೆ ನೀಡಿದರು. ನಾಡಿನ**

ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಜನೋಪಯೋಗಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನದ ಕೊರತೆ ಇಲ್ಲ ಎಂದು, ಮುಖ್ಯಮಂತ್ರಿ ನುಡಿದರು. ಪಂಚ ಖಾತ್ರಿ ಯೋಜನೆಗಳ ಕುರಿತಾದ, ವಾರ್ತಾ ಇಲಾಖೆ ಪ್ರಕಟಿಸಿದ, ಕಿರು ಹೊತ್ತಗೆಯನ್ನು, ಗಣ್ಯರು ಬಿಡುಗಡೆ ಮಾಡಿದರು.

<><><>

ಕೆರೆ, ಕಟ್ಟೆಗಳನ್ನು ಅಭಿವೃದ್ಧಿ ಪಡಿಸಿ, ಮಳೆ ನೀರನ್ನು ಸಂಗ್ರಹಿಸಿ, ಅಂತರ್ಜಲ ವೃದ್ಧಿಗೆ, ವೈಜ್ಞಾನಿಕ ಯೋಜನೆಗಳನ್ನು ರೂಪಿಸಲಾಗಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ, ಎನ್.ಎಸ್.ಬೋಸರಾಜು ತಿಳಿಸಿದ್ದಾರೆ. ಬೀದರ ಜಿಲ್ಲೆಯ, ಮನ್ನಳ್ಳಿ ಗ್ರಾಮದಲ್ಲಿ, ಸಣ್ಣ ನೀರಾವರಿ ಹಾಗೂ ಅಂತರ್ಜಲ ಅಭಿವೃದ್ಧಿ ಇಲಾಖೆಯಿಂದ ಕೈಗೊಳ್ಳಲಾದ, ಕೆರೆ ಅಭಿವೃದ್ಧಿ ಹಾಗೂ ಕೆರೆ ಸೌಂದರ್ಯೀಕರಣ ಕಾಮಗಾರಿಯನ್ನು, ಸಚಿವರು ವೀಕ್ಷಿಸಿದರು. ತಮ್ಮ ಇಲಾಖೆ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಗುಣಮಟ್ಟಕ್ಕೆ ಆದ್ಯತೆ ನೀಡಿ, ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು, ಎಂದರು.

<><><>

ರಾಯಚೂರು ಜಿಲ್ಲೆ, ಮಾನ್ವಿ ತಾಲೂಕು, ನೀರಮಾನ್ವಿ ಗ್ರಾಮದ ರೇಣುಕಾ ಅವರು, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ್ದಾರೆ. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ, ತಮಗೆ 100 ದಿನಗಳ ಕೂಲಿ ದೊರಕಿ, ಗೌರವಯುತವಾಗಿ ಬದುಕುವ, ಅವಕಾಶ ಸಿಕ್ಕಿದೆ ಎಂದು, ಸಂತಸ ವ್ಯಕ್ತ ಪಡಿಸಿದ್ದಾರೆ.

<><><>

ರೇಣುಕಾ ಧ್ವನಿ 28 ಸೆಕೆಂದುಗಳು

<><><>

ರಾಷ್ಟ್ರೀಯ ರೇಲ್ವೆ ದಿನವನ್ನು, ಆಚರಿಸಲಾಯಿತು. ಏಪ್ರಿಲ್ 16 ರಂದು ಅಂದರೆ ನಿನ್ನೆ, ಭಾರತದಲ್ಲಿ ಮೊದಲ ಪ್ರಯಾಣಿಕ ರೈಲು ಕಾರ್ಯಾರಂಭಿಸಿದ, ವಾರ್ಷಿಕೋತ್ಸವವನ್ನು ನೆನಪಿಸುತ್ತದೆ. 1853 ರ ಏಪ್ರಿಲ್ 16 ರಂದು, ಬೋರಿ ಬಂದರ್, ಈಗ ಮುಂಬೈ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ಮತ್ತು ಥಾಣೆ ನಡುವೆ, ಈ ರೈಲು ಕಾರ್ಯಾಚರಣೆ ಆರಂಭಿಸಿತು. ರಾಷ್ಟ್ರೀಯ ರೇಲ್ವೆ ದಿನ, ಭಾರತೀಯ ರೇಲ್ವೆ ಇತಿಹಾಸ ಮತ್ತು ಮಹತ್ವವನ್ನು ಸಾರುತ್ತದೆ.

<><><>

ಕೆ–ರೈಡ್ ಅಧಿಕಾರಿಗಳೊಂದಿಗೆ, ರಾಜ್ಯದ ಪ್ರಮುಖ ರೇಲ್ವೆ ಯೋಜನೆಗಳ ಪ್ರಗತಿಯನ್ನು, ಮೂಲ ಸೌಕರ್ಯ ಅಭಿವೃದ್ಧಿ ಖಾತೆ ಸಚಿವ, ಎಂ.ಬಿ. ಪಾಟೀಲ ಪರಿಶೀಲಿಸಿದರು. ರಾಷ್ಟ್ರೀಯ ರೇಲ್ವೆ ದಿನಾಚರಣೆ ಹಿನ್ನೆಲೆ, ಬೆಂಗಳೂರಿನಲ್ಲಿ ಸಭೆ ನಡೆಸಿದ ಅವರು, ವಿಜಯಪುರ–ಬೆಂಗಳೂರು ರೇಲ್ವೆ ಪ್ರಯಾಣವನ್ನು, 16 ರಿಂದ 10 ಗಂಟೆಗೆ ಇಳಿಸಲು, ಕ್ರಮ ಕೈಗೊಳ್ಳುವಂತೆ, ತಿಳಿಸಿದರು. ಗದಗ–ವಿಜಯಪುರ ಜೋಡಿ ಮಾರ್ಗ, ಬಾಗಲಕೋಟೆ–ಕುಡಚಿ, ಧಾರವಾಡ–ಕಿತ್ತೂರು–ಬೆಳಗಾವಿ ಮಾರ್ಗಗಳ ಕಾಮಗಾರಿ ಪ್ರಗತಿ, ಹಾಗೂ ಹುಬ್ಬಳ್ಳಿ–ಅಂಕೋಲಾ ಮಾರ್ಗದ, ಮರು ಸಮೀಕ್ಷೆ ಕುರಿತು, ಚರ್ಚೆ ಹಾಗೂ ರೇಲ್ವೆ ವಿದ್ಯುದ್ದೀಕರಣ ತ್ವರಿತ ಗತಿಯಲ್ಲಿ ಪೂರ್ಣಗೊಳಿಸಿ, ವಂದೇ ಭಾರತ್ ರೈಲು ಸಂಚಾರಕ್ಕೆ, ಸಿದ್ಧತೆ ಮಾಡಿಕೊಳ್ಳಲು, ಸಚಿವರು ಕೆ–ರೈಡ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ ಅವರಿಗೆ ಸೂಚಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

‘ಮಹಿಳೆಯರು ಮತ್ತು ಯುವತಿಯರಲ್ಲೂ ರಕ್ತಸ್ರಾವ’ ಘೋಷ ವಾಕ್ಯದೊಂದಿಗೆ, ಇಂದು, ವಿಶ್ವ ಹಿಮೋಫಿಲಿಯಾ ದಿನ ಆಚರಿಸಲಾಗುತ್ತಿದೆ. ಕುಸುಮರೋಗ, ಹಿಮೋಫಿಲಿಯಾ ಮತ್ತು ಇತರೆ ಆನುವಂಶಿಕ ರಕ್ತಸ್ರಾವದ ಅಸ್ವಸ್ಥತೆಗಳ ಬಗ್ಗೆ, ಜಾಗೃತಿ ಮೂಡಿಸಲು, ಮೀಸಲಾದ ದಿನ. ರಕ್ತಸ್ರಾವದ ಅಸ್ವಸ್ಥತೆಗಳಿಗೆ ತುತ್ತಾದ ಹೊಸ ಸದಸ್ಯರನ್ನು ಗುರುತಿಸುವ ಮತ್ತು ತಲುಪಿ, ಚಿಕಿತ್ಸೆ ಮತ್ತು ಆರೈಕೆ ಖಾತ್ರಿ ಪಡಿಸುವ ದಿನವಾಗಿ, ಆಚರಿಸಲ್ಪಡುತ್ತದೆ.

<><><>

ವಿಶ್ವದಲ್ಲಿ 4 ಲಕ್ಷ ಹಿಮೋಫೀಲಿಯಾ ಬಾಧಿತರಿದ್ದು, ಆ ಪೈಕಿ, ಭಾರತದಲ್ಲಿ ಶೇಕಡ 25ರಷ್ಟು ಜನರಿದ್ದಾರೆ; ಕರ್ನಾಟಕದಲ್ಲಿ 7 ಸಾವಿರ ಕುಸುಮರೋಗಿಗಳಿದ್ದಾರೆ ಎಂದು, ದಾವಣಗೆರೆಯ, ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯದಲ್ಲಿ, ರೋಗ ನಿದಾನಶಾಸ್ತ್ರದ ಪ್ರಾಧ್ಯಾಪಕ ಹಾಗೂ ಕರ್ನಾಟಕ ಹಿಮೋಫೀಲಿಯಾ ಸೊಸಾಯಿಟಿ ಅಧ್ಯಕ್ಷ ಡಾಕ್ಟರ್ ಸುರೇಶ ಹನಗವಾಡಿ ತಿಳಿಸಿದ್ದಾರೆ. ಕಳೆದ 2 ವರ್ಷಗಳ ಹಿಂದೆ ಆರಂಭವಾದ, ‘ಮೊಬೈಲ್ ಕ್ಲಿನಿಕ್’ ಮಾರಣಾಂತಿಕ ಅಂತರ್ ರಕ್ತಸ್ರಾವ ಅನುಭವಿಸುತ್ತಿದ್ದ, 70 ಜನರನ್ನು ರಕ್ಷಿಸಲಾಗಿದೆ ಎಂದು, ಅವರು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಡಾ. ಸುರೇಶ ಹನಗವಾಡಿ ಧ್ವನಿ 60 ಸೆಕೆಂದುಗಳು

<><><>

ಧಾರವಾಡದ ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯದ, ಆರ್ಟ್ ಗ್ಯಾಲರಿಯಲ್ಲಿ, ವಿದ್ಯಾರ್ಥಿಗಳು ರಚಿಸಿದ, ಭಾರತೀಯ ಸಾಂಪ್ರದಾಯಿಕ ಕಲೆಗಳು ಹಾಗೂ ಜಾನಪದ ಚಿತ್ರಗಳಿಂದ, ಇಡೀ ಆವರಣ ಕಂಗೊಳಿಸುತ್ತಿದೆ. ವಿಶ್ವ ಚಿತ್ರಕಲಾ ದಿನದ ಪ್ರಯುಕ್ತ, ಭಿತ್ತಿ ಚಿತ್ರಗಳನ್ನು ಲೋಕಾರ್ಪಣೆ ಗೊಳಿಸಲಾಗಿದೆ. ಕಾಂಗ್ರಾ, ಬಸೋಲಿ, ಮೇವಾರ, ವಿಜಯನಗರ, ಅಮ್ಮಿನಬಾವಿ, ನವಲಗುಂದ, ರಾಗಮಾಲಾ, ರಾಜಸ್ಥಾನಿ, ಪಟಚಿತ್ರಗಳು, ಕಿನ್ನಾಳ, ಮೈಸೂರು, ಅಜಂತಾ, ಕೋಟಾ, ವರ್ಲಿ, ಮಧುಬನಿ, ಪಹಾಡಿ ಹಾಗೂ ಬುಂದಿ, ಕಲೆಗಳ ಚಿತ್ರಗಳನ್ನು, ವಿದ್ಯಾರ್ಥಿಗಳು ತಮ್ಮ ಕುಂಚದಲ್ಲಿ ಅರಳಿಸಿದ್ದಾರೆ.

<><><>

ಇದೇ 21 ರಿಂದ, ಮಹಿಳೆಯರ ಹಾಕಿ ಪಂದ್ಯಾವಳಿ ಆರಂಭಗೊಳ್ಳಲಿದ್ದು, 56 ಮಹಿಳಾ ತಂಡಗಳು ಹೆಸರು ನೊಂದಾಯಿಸಿವೆ ಎಂದು, ಮುದ್ದಂಡ ಹಾಕಿ ಉತ್ಸವ ಸಮಿತಿ ಅಧ್ಯಕ್ಷ, ಮುದ್ದಂಡ ರಶಿನ್ ಸುಬ್ಬಯ್ಯ ತಿಳಿಸಿದ್ದಾರೆ. ಮಡಿಕೇರಿಯಲ್ಲಿ ಮಾತನಾಡಿದ ಅವರು, ಕೊಡವ ಕುಟುಂಬಗಳ, ಹಾಕಿ ಪಂದ್ಯಾವಳಿಯ, ಬೆಳ್ಳಿ ಮಹೋತ್ಸವ ಸಂಭ್ರಮದ ಹಿನ್ನೆಲೆ, ಪ್ರಥಮ ಬಾರಿಗೆ ಮಹಿಳಾ ತಂಡಗಳ, ಹಾಕಿ ಪಂದ್ಯಾವಳಿ ಆಯೋಜಿಸಲಾಗಿದೆ, ಎಂದರು. ಫೀಲ್ಡ್ ಮಾ ್ಲ್ ಕಾರ್ಯಪ್ಪ ಕಾಲೇಜು ಮೈದಾನದಲ್ಲಿ, ಸೋಮವಾರ ಬೆಳಗ್ಗೆ 9 ಗಂಟೆಗೆ, ಪದ್ಮಶ್ರೀ ಪುರಸ್ಕೃತ ಕಲಾವಿದೆ, ಐಮುಡಿಯಂಡ ರಾಣಿ ಮಾಚಯ್ಯ ಹಾಗೂ ಬಾಸ್ಕೆಟ್‌ಬಾಲ್ ರಾಷ್ಟ್ರೀಯ ತಂಡದ ಆಟಗಾರ್ತಿ, ಮಂಡೇಪಂಡ ಪು ್ಪ ಕುಟ್ಟಣ್ಣ ಉದ್ಘಾಟಿಸಲಿದ್ದಾರೆ, ಎಂದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಚಿಕ್ಕಬಳ್ಳಾಪುರದ, ಸರ್ ಎಂ. ವಿಶ್ವೇಶ್ವರಾಯ ಸಭಾಂಗಣದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಅಧ್ಯಕ್ಷ, ಎಂ. ಗೋವಿಂದರಾವ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ.

<><><>

ಬೆಂಗಳೂರಿನ ಯಕ್ಷಗಾನ ಅಕಾದೆಮಿ, ಬೇರೆ ಜಿಲ್ಲೆಗೆ ಸ್ಥಳಾಂತರಗೊಳ್ಳುವುದಿಲ್ಲ ಎಂದು, ಅಕಾದೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ಸ್ಪಷ್ಟ ಪಡಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆಯ, ಪ್ರವಾಸಿ ಸ್ಥಳಗಳ ಬಗ್ಗೆ, ಸಮಗ್ರ ಅಧ್ಯಯನ ವರದಿ ಸಲ್ಲಿಸುವಂತೆ, ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ರಾಜೇಂದ್ರ ಕೆ.ವಿ., ಸಮಿತಿ ಸದಸ್ಯರಿಗೆ ಸೂಚಿಸಿದ್ದಾರೆ.

<><><>

ಅರೆಭಾ ೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾದೆಮಿ, ಕೊಡಗಿನ ಭಾಗಮಂಡಲದಲ್ಲಿ ಆಯೋಜಿಸಿದ, ‘ಅರೆಭಾ ೆ ಗಡಿನಾಡ ಉತ್ಸವ’ಕ್ಕೆ, ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿದರು.

<><><>

ಧಾರವಾಡ ಜಿಲ್ಲೆ, ನವಲಗುಂದ ತಾಲೂಕು, ಶಾನವಾಡ ಗ್ರಾಮದಲ್ಲಿ ಜರುಗಿದ, ಸಾಮೂಹಿಕ ವಿವಾಹ ಮಹೋತ್ಸವದಲ್ಲಿ, ಲೋಕೋಪಯೋಗಿ ಖಾತೆ ಸಚಿವ ಸತೀಶ ಜಾರಕಿಹೊಳಿ, ಪಾಲ್ಗೊಂಡಿದ್ದರು.

<><><>

ಗದಗ ಜಿಲ್ಲೆ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ, ಮುಳಗುಂದದ ಎಸ್.ಜೆ., ಜೆ.ಎಂ. ಪ್ರೌಢ ಶಾಲೆ ಆವರಣದಲ್ಲಿ, ನಾಡಿದ್ದು ಬೆಳಗ್ಗೆ 10.30ಕ್ಕೆ, ಜನತಾ ದರ್ಶನ ಜರುಗಲಿದೆ.

<><><>

ಬಾಲ ಹಾಗೂ ಕಿಶೋರ ಕಾರ್ಮಿಕರು ಕಂಡುಬಂದಲ್ಲಿ, ಮಕ್ಕಳ ಉಚಿತ ಸಹಾಯವಾಣಿ ಸಂಖ್ಯೆ 1098 ಕ್ಕೆ ಕರೆ ಮಾಡಿ, ಮಾಹಿತಿ ನೀಡಬಹುದು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಸಾಮಾಜಿಕ ಆರ್ಥಿಕ ಸಮೀಕ್ಷೆ ವರದಿ; ಇಂದು ಬೆಂಗಳೂರಿನಲ್ಲಿ, ವಿಶೇಷ ಸಚಿವ ಸಂಪುಟ ಸಭೆಯಲ್ಲಿ, ಚರ್ಚೆ.
- ರಾಜ್ಯದ ಪ್ರಮುಖ ರೇಲ್ವೆ ಯೋಜನೆಗಳ ಸ್ಥಿತಿಗತಿ; ಕೆ–ರೈಡ್ ಪ್ರತಿನಿಧಿಗಳೊಂದಿಗೆ, ಸಚಿವ ಎಂ.ಬಿ. ಪಾಟೀಲ, ಸಮಾಲೋಚನೆ.
- ಕರ್ನಾಟಕದಲ್ಲಿ, 7 ಸಾವಿರ ಕುಸುಮರೋಗಿಗಳು – ಹಿಮೋಫಿಲಿಯಾ ಸೊಸಾಯಿಟಿ ಅಧ್ಯಕ್ಷ, ಡಾಕ್ಟರ್ ಸುರೇಶ ಹನಗವಾಡಿ, ಮಾಹಿತಿ.
- ಮುದ್ದಂಡ ಕಪ್ ಹಾಕಿ; ಸೋಮವಾರದಿಂದ, 56 ಮಹಿಳಾ ತಂಡಗಳು ಪಂದ್ಯಾವಳಿಯಲ್ಲಿ, ಭಾಗಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>